76

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್.ಬಿ.ಡಿ-3965/2014/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:15-02-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಸಂಪತ್ತು ತಂದೆ ಲೇಟ್ ಎಲ್. ಪುಟ್ಟಸ್ವಾಮಿ, ವಾಸ: ಅಬ್ಬನಗುಪ್ಪೆ, ಬಿಡದಿ ಅಂಚೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ.

****

ಈ ದೂರನ್ನು ಶ್ರೀ ಸಂಪತ್ತು ತಂದೆ ಲೇಟ್ ಎಲ್. ಪುಟ್ಟಸ್ವಾಮಿ, ವಾಸ: ಅಬ್ಬನಗುಪ್ಪೆ, ಬಿಡದಿ ಅಂಚೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಗಂಗಾಧರಯ್ಯ, ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ ಉಪವಿಭಾಗ, ರಾಮನಗರ ಜಿಲ್ಲೆ ಹಾಗೂ ವಾಸ: ನಂ:1775, 6ನೇ ಮುಖ್ಯರಸ್ತೆ, 8ನೇ ಕ್ರಾಸ್, ಆರ್.ಪಿ.ಸಿ. ಲೇಔಟ್, ವಿಜಯನಗರ, ಬೆಂಗಳೂರು, (2) ಶ್ರೀ ಕಿಶೋರ ದೇಸಾಯಿ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರಾಮನಗರ ಉಪವಿಭಾಗ, ರಾಮನಗರ ಜಿಲ್ಲೆ, (3) ಶ್ರೀ ಗೋವಿಂದರಾವ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್- II ಲೋಕೋಪಯೋಗಿ ಇಲಾಖೆ ರಾಮನಗರ ಉಪವಿಭಾಗ, ರಾಮನಗರ ಜಿಲ್ಲೆ ಹಾಗೂ ಹಾಲಿ ಸಹಾಯಕ ಇಂಜಿನಿಯರ್ (ವಿಭಾಗ-2), ರಾಷ್ಟ್ರೀಯ ಹೆದ್ದಾರಿ ಉಪ-ವಿಭಾಗ, ಚಿಕ್ಕಬಳ್ಳಾಪುರ, (4) ಶ್ರೀ ಶ್ರೀನಿವಾಸ, ನಿವೃತ್ತ ಲೆಕ್ಕಾಧಿಕಾರಿಗಳು, ಲೋಕೋಪಯೋಗಿ ಇಲಾಖೆ ರಾಮನಗರ ಉಪ-ವಿಭಾಗ, ರಾಮನಗರ ಜಿಲ್ಲೆ ಮತ್ತು (5) ಪುಟ್ಟಸ್ವಾಮಿ, ಲೋಕೋಪಯೋಗಿ ಇಲಾಖೆ ಕಛೇರಿ, ರಾಮನಗರ ಉಪವಿಭಾಗ, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. <u>ದೂರಿನ ಸಂಕ್ಷಿಪ್ತ ವಿವರ:</u>

ಮೈಸೂರು ರಸ್ತೆಯ ಜೆಂಕ್ಷನ್ ಯಿಂದ ಕೊಕಕೋಲ ಪ್ಯಾಕ್ಟರಿಯವರೆಗೆ ರಸ್ತೆಯನ್ನು ೦.೦೦ ಯಿಂದ 3 ಕಿ.ಮೀ., ರವರೆಗೆ 4 ಪತದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುತ್ತಿದ್ದು ಈ ಕಾಮಗಾರಿಯಲ್ಲಿ ಅವ್ಯವಹಾರಗಳಾಗಿದ್ದು ಈ ಬಗ್ಗೆ ತನಿಖೆ ನಡೆಸಲು ಕೋರಿಕೊಂಡಿದ್ದಾರೆ. ಶ್ರೀ.ಪಿ.ವಿಜಯ ಕುಮಾರ್ 1ನೇ ದರ್ಜೆ ಗುತ್ತಿಗೆದಾರರು 2009-10ನೇ ಸಾಲಿನಲ್ಲಿ ಆಗಿನ ಬೆಂಗಳೂರು ವೃತ್ತದ ಧರ ಪಟ್ಟಿಯಂತೆ ಶೇ 18 ಹೆಚುವರಿಯಾಗಿ ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತು ಸದರಿ ಗುತ್ತಿಗೆದಾರರಿಗೆ 7 ಬಿಲ್ಲುಗಳು ಪಾವತಿಯಾಗಿದ್ದು ಸುಮಾರು 1547ಲಕ್ಷ ರೂಗಳನ್ನು ಇಲಾಖೆಯ ವತಿಯಿಂದ 31.3.2012ರವರೆಗೆ ಪಾವತಿಸಲಾಗಿದೆ. ಶೇ 60ರಷ್ಟು ಮಾತ್ರ ಕಾಮಗಾರಿ ಪೂರ್ಣಗೊಂಡಿದ್ದು ಇನ್ನು 40 ಶೇ ಕಾಮಗಾರಿಯನ್ನು ಮಾಡಿಲ್ಲ. ಮಾಹಿತಿ ಹಕ್ಕುನಡಿಯಲ್ಲಿ ತೆಗೆದುಕೊಂಡುವ ಅಳತೆ ಪುಸ್ತಕಕ್ಕು ಮತ್ತು ಪಾವತಿಸಿರುವ ಬಿಲ್ಲಿನ ವೋಚರ್ ಗಳಿಗೂ ತಾಳೆ ಇಲ್ಲ ಕಾಮಗಾರಿ ಪೂರ್ಣಗೊಳ್ಳದೆ ಎಫ್.ಎಸ್.ಡಿ ಮತ್ತು ಇ.ಎಂ.ಡಿ ಹಣವನ್ನು ಪಡೆದಿರುತ್ತಾರೆ. ಆದಕಾರಣ ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಸಂಸ್ಥೆಯ ವಿಶೇಷ ನ್ಯಾಯಲಯಕ್ಕೆ ವಹಿಸುವಂತೆ ಕೋರಿರುತ್ತಾರೆ.

3. ಈ ದೂರಿನ ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1, 3 ಮತ್ತು 5ನೇ ಎದುರುದಾರರು ಒಂದೇ ರೀತಿಯ ಆಕ್ಷೇಪಣೆಗಳನ್ನು ಕಂಡಿಕೆ ವಾರು ಸಲ್ಲಿಸಿದ್ದಾರೆ. ತಾವು ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಇನ್ನು ಈ ಕಾಮಗಾರಿ ಪ್ರಗತಿಯಲ್ಲಿತ್ತು. ಅಂತಿಮ ವಾಗಿರಲಿಲ್ಲ ಕರಾರಿನಂತೆ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿದ ನಂತರ ನಿಯಮಾವಳಿಗಳಂತೆ ಅಂತಿಮ ಗೊಳಿಸಬೇಕಾಗಿರುತ್ತದೆ. ವಿವಾಧಿತ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ಸರ್ಕಾರವು ಈಗಾಗಲೇ ಆದೇಶ ಸಂ: ಲೋಇ/93/ಸೆಇವಿ/2013 ಬೆಂಗಳೂರು ದಿ: 17.10.2013ರಲ್ಲಿ ಜಂಟಿ ಇಲಾಖಾ ವಿಚಾರಣೆಗಾಗಿ ಈಗಾಗಲೇ ವಿಚಾರಣಾ ಅಧಿಕಾರಿಯನ್ನಾಗಿ ಶ್ರೀ. ವಸಂತ ಹೆಚ್ ಮುಳಸಾವಳಗಿ ನಿವೃತ್ತ ಜಿಲ್ಲಾ ನ್ಯಾಯಾದೀಶರು ಇವರನ್ನು ನೇಮಿಸಲಾಗಿದೆ ವಿಚಾರಣೆ ಇನ್ನು ಮುಗಿದಿಲ್ಲ ಆದ್ದರಿಂದ ದೂರಿನಿಂದ ನಿಮ್ಮನ್ನು ಕೈಬಿಡಲು ಕೋರಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಸಲ್ಲಿಸಿರುವ ಅಳತೆ ಪುಸ್ತಕದ ನಕಲು ಕೇವಲ ಅಬ್‌ಸ್ಟ್ರಾಕ್ಟ ಆಗಿದೆ. ವಿವರವಾದ ಅಳತೆಗಳು ಪ್ರತ್ಯೇಕ ಅಳತೆ ಪುಸ್ತಕದಲ್ಲಿ ಲಭ್ಯವಿದ್ದು ವಿವಾದಿತ ಕಾಮಗಾರಿ ಪೂರ್ಣಗೊಳಿಸದೆ ಇದ್ದುದ್ದರಿಂದ ಟೆಂಡರ್

ನಿಯಮಾವಳಿಯಂತೆ ಗುತ್ತಿಗೆಯನ್ನು ರದ್ದು ಗೊಳಿಸಲಾಗಿದೆ ಸರ್ಕಾರಕ್ಕೆ ಯಾವುದೇ ನಷ್ಟ ಉಂಟಾಗಿಲ್ಲ ಅಂತ ಆಕ್ಷೇಪಣೆ ಸಲ್ಲಿಸಿದ್ದಾರೆ.

5. ಎದುರುದಾರರು ಸಲ್ಲಸಿರುವ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿದೆ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

6. ದೂರುದಾರರ ದೂರು ಮತ್ತು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ (ಸೇವೆಗಳು-ಸಿ) ರವರು ಎದುರುದಾರರುಗಳ ವಿರುದ್ಧ ಮತ್ತು ಶ್ರೀ.ಡಿ.ಎಂ.ಶಿವಯೋಗಿ ಲೆಕ್ಕ ಅಧೀಕ್ಷಕರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಿಯಮ 13ರ ಅಡಿಯಲ್ಲಿ ಪ್ರಾರಂಭಿಸಲು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುವುದರಿಂದ ಸದರಿ ಇಲಾಖಾ ವಿಚಾರಣೆಯಲ್ಲಿ ಏನು ಪ್ರಗತಿಯಾಗಿದೆ ಮತ್ತು ಯಾವುದಾದರೂ ಆದೇಶವಾಗಿದೆಯೇ ಎನ್ನುವ ವಿವರಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ಸೂಚಿಸಲಾಗಿತ್ತು.

7. ಈ ಪ್ರಕರಣದ ದೂರಿನಲ್ಲಿ ಎದುರುದಾರರ ಕರ್ತವ್ಯ ನಿರ್ಲಕ್ಷತೆ ಮಾತ್ರ ಅಲ್ಲದೇ ಸಾರ್ವಜನಿಕ ರಸ್ತೆಯನ್ನು ನಿರ್ದಿಷ್ಟಪಡಿಸಿದಂತೆ ನಿರ್ವಹಿಸಿಲ್ಲ ಅಂತ ಸಹ ಆಪಾದನೆ ಇರುವುದರಿಂದ ಈ ಪ್ರಕರಣವನ್ನು ಮುಖ್ಯ ಇಂಜಿನಿಯರ್, (ತಾಂತ್ರಿಕ ವಿಭಾಗ) ಕರ್ನಾಟಕ ಲೋಕಾಯುಕ್ತ ಇವರಿಗೆ ವಹಿಸಿ ವಿವಾದಿತ ಸ್ಥಳದ ಸಂಪೂರ್ಣ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

8. ಅದರಂತೆ, ಮುಖ್ಯ ಇಂಜಿನಿಯರ್ (ಪ್ರಭಾರ), ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣದ ತನಿಖೆಯನ್ನು ಮಾಡಿಸಿ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ 1 ರಿಂದ 3ನೇ ಎದುರುದಾರರ ವಿರುದ್ಧ ಆಪಾದನೆಗಳು ಸಾಬೀತಾಗಿವೆ. ವಿವಾದಿತ ರಸ್ತೆ ಕಾಮಗಾರಿಯು ಡಾಂಬರ ಮತ್ತು ಸಬ್‌ಬೇಸ್‌ಗಳ ದಪ್ಪವನ್ನು ಟೆಂಡರ್ ನಿರ್ದಿಷ್ಟತೆಗೆ ಅನುಗುಣವಾಗಿ ಹೋಲಿಸಿದೆ. ಪರಿಮಾಣಗಳ ಕೊರತೆ ಮೊತ್ತವು ರೂ.1,73,01,066/- ಆಗಿರುತ್ತವೆ. ಸದರಿ ಪದರಗಳ ಕೊರತೆಯ ಪರಿಮಾಣಗಳಿಗೆ ಹಣ ಪಾವತಿಯಾಗಿರುವುದು ಹಾಗೂ ಅವ್ಯವಹಾರ ಆಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, 1ನೇ

ಎದುರುದಾರರು ಶೇಕಡ 25% ರಷ್ಟು, 2 ಮತ್ತು 3ನೇ ಎದುರುದಾರರು ತಲಾ ಶೇಕಡ 37.5% ರಷ್ಟು ನಷ್ಟಕ್ಕೆ ಕಾರಣರಾಗಿದ್ದಾರೆ ಅಂತ ಅಭಿಪ್ರಾಯಪಟ್ಟಿದ್ದಾರೆ.

9. ಮುಖ್ಯ ಇಂಜಿನಿಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಇವರು ಸಲ್ಲಿಸಿರುವ ತನಿಖಾ ವರದಿಯ ಮೇಲೆ 1 ರಿಂದ 3ನೇ ಎದುರುದಾರರಿಗೆ ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಆದರೆ 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

(ಬಿ) 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಮ್ಮ ಸಮಕ್ಷಮದಲ್ಲಿ ತನಿಖೆಯಾಗಿಲ್ಲ. ಆಪಾದಿತ ಇಂಜಿನಿಯರ್‌ಗಳನ್ನು ತನಿಖಾ ಸಮಯದಲ್ಲಿ ಆಹ್ವಾನಿಸಿಲ್ಲ. ಜಂಟಿ ಅಳತೆಯ ದಿನಾಂಕದವರೆಗೆ 7ನೇ ಭಾಗಶಃ ಬಿಲ್ಲುಗಳನ್ನು ಪಾವತಿಸುವಾಗ (ದಿನಾಂಕ: 31-3-2011 ರಂದು) ಹೆಚ್ಚುವರಿ ಕಾಮಗಾರಿಗಳನ್ನು ಮೇಲಾಧಿಕಾರಿಗಳ ಆದೇಶದಂತೆ ಗುತ್ತಿಗೆದಾರರ ಮುಖಾಂತರವೇ ಮಾಡಿಸಲಾಗಿದೆ. ದೊಡ್ಡ ಮರಗಳ ಬೇರುಗಳನ್ನು ಬುಡಸಮೇತ ಕಿತ್ತಿದ್ದರಿಂದ ಉಂಟಾದ ಹೊಂಡಕ್ಕೆ ಮರಳು ಮಣ್ಣಿನ ಮಿಶ್ರಣ ತುಂಬುವುದು, ಕಾಂಕ್ರೀಟ್ ಚರಂಡಿ ನಿರ್ಮಿಸಲು ಉಕ್ಕಿನ ಸೆಂಟ್ರಿಂಗ್ ಅಳವಡಿಸಿರುವುದು, ಪೈಪುಗಳನ್ನು ಅಳವಡಿಸುವುದು, ಆರ್.ಸಿ.ಸಿ. ತಡೆ ಗೋಡೆ ನಿರ್ಮಾಣ ಇವುಗಳನ್ನು ತನಿಖಾಧಿಕಾರಿಯು ಗಣನೆಗೆ ತೆಗೆದುಕೊಂಡಿಲ್ಲ. ಕಾರಣಾಂತರಗಳಿಂದ ಗುತ್ತಿಗೆದಾರರು ಕಾಮಗಾರಿಯನ್ನು ನಿಲ್ಲಿಸಿದ್ದು ಮಾರ್ಚ-2011 ರಿಂದ ಮೇ-2014 ರ ವರೆಗೆ ನಿಲ್ಲಿಸಿದ್ದನ್ನು ರದ್ದುಗೊಳಿಸಲಾಗಿದೆ. ಸದರಿ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಪರಿಷ್ಕೃತಗೊಂಡಿದೆ. ಗುತ್ತಿಗೆದಾರರು ಎಫ್.ಎಸ್.ಡಿ.ಯನ್ನು ಬ್ಯಾಂಕ್ ಗ್ಯಾರೆಂಟಿ ಪಡೆದು ವಾಪಸ್ಸು ಕೊಡಲು ಒತ್ತಡ ತಂದಿದ್ದು ಕಾಮಗಾರಿ ಮುಂದುವರೆಯುವ ನಿರೀಕ್ಷೆ ಇಲ್ಲದೇ ಇದ್ದುದ್ದರಿಂದ ಹಿಂತಿರುಗಿಸಲಾಗಿದೆ.

(ಸಿ) ಮುಂದುವರೆದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಇಲಾಖಾ ವಿಚಾರಣೆ ನಡೆದಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಸಂತ ಮುಳಸಾವಳಗಿ ಇವರು ಸರ್ಕಾರಕ್ಕೆ ದಿನಾಂಕ: 15-9-2014 ರಂದು ವರದಿಯನ್ನು ನೀಡಿದ್ದು ವಿಚಾರಣೆ ನಡೆದು ಆಪಾದನೆಗಳು ಸಾಬೀತಾಗಿಲ್ಲ. ಆದ್ದರಿಂದ, ತಮ್ಮನ್ನು ದೋಷ ಮುಕ್ತರನ್ನಾಗಿಸಿದೆ. 2011 ರಲ್ಲಿ

ನಿರ್ಮಿಸಿದ ರಸ್ತೆಯು 2017 ರವರೆಗೆ ಸುಸ್ಥಿತಿಯಲ್ಲಿತ್ತು. ಆದ್ದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿಕೊಂಡಿದ್ದಾರೆ.

10. ಈ ಪ್ರಕರಣದ ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಸಂತ ಮುಳಸಾವಳಗಿ ಇವರ ಮುಂದೆ ಇದ್ದ ಇಲಾಖಾ ವಿಚಾರಣೆಯಲ್ಲಿ ವಿವಾದಿತ ರಸ್ತೆಯ ಸರಪಳಿ ರಸ್ತೆ 2.740 ಯಿಂದ 3.00 ಕೀ.ಮೀ ವರೆಗೆ ಭಾಗದಲ್ಲಿ 300 ಮೀಟರುಗಳ ಡಾಂಬರೀಕಣ ಕಾಮಗಾರಿ ಕೈಗೊಂಡಿರುವುದು ಕಂಡುಬಂದಿಲ್ಲ. ಕಾಬಲ್ ಸ್ಟೋನ್‌ಗಳನ್ನು 750 ಚರದ ಮೀಟರ್‌ಗಳಲ್ಲಿ ಹಾಕಲಾಗಿದೆ ಅಂತ ಪಾವತಿಗಾಗಿ ಸಲ್ಲಿಸಿದ್ದು, ರಸ್ತೆಯಲ್ಲಿ ಅದನ್ನು ಅಳವಡಿಸಿಲ್ಲ. ಕಾಬಲ್ ಸ್ಟೋನ್ ಅಳವಡಿಸಿರುವುಕ್ಕಾಗಿ ರೂ.5.99 ಲಕ್ಷ ರೂಪಾಯಿಗಳ ಬಿಲ್ಲನ್ನು ತಯಾರಿಸಿರುವುದು ಡಾಂಬರೀಕರಣ ಮಾಡದೇ ಇರುವ ಕೆಲಸಕ್ಕೆ ರೂ.43.61 ಲಕ್ಷ ರೂಪಾಯಿಗಳ ಬಿಲ್ಲು ತಯಾರಿಸಿರುವ ಬಗ್ಗೆ ಮಾತ್ರ ಎದುರುದಾರರ ವಿರುದ್ದ ಇಲಾಖಾ ವಿಚಾರಣೆ (ಇಲಾಖಾ ವಿಚಾರಣೆ ಸಂ:1783/2013-14) ನಡೆದಿರುತ್ತದೆ.

11. ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಸಲ್ಲಿಸಿರುವ ದಾಖಲೆಗಳಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರ ವಿಚಾರಣಾ ವರದಿ ಮತ್ತು ಇತರೇ 18 ದಾಖಲೆಗಳ ಆಧಾರದ ಮೇರೆಗೆ ಸರ್ಕಾರವು ಆದೇಶ ಸಂ:ಲೋ ಇ 93 ಸೇಇಇ 2013, ಬೆಂಗಳೂರು ದಿನಾಂಕ: 18-3-2017 ರ ಆದೇಶದಂತೆ 5 ಜನ ಸರ್ಕಾರಿ ನೌಕರರುಗಳ ಆಪಾದನೆಗಳನ್ನು ಕೈಬಿಟ್ಟು ದೋಷ ಮುಕ್ತರನ್ನಾಗಿಸಿದೆ. ಸದರಿ ಸರ್ಕಾರದ ನಡವಳಿಗಳು ಮೈಸೂರು ರಸ್ತೆಯ ಜಂಕ್ಷನ್‌ಯಿಂದ ಕೋಕ್ ಕೋಲಾ ಫ್ಯಾಕ್ಟರಿವರೆಗೆ ಕಿ.ಮೀ ಸಂ: 0.00 ಯಿಂದ 3.00 ವರೆಗೆ ರಸ್ತೆ ಕಾಮಗಾರಿ ನಿರ್ವಹಿಸುವಲ್ಲಿ ಕರ್ತವ್ಯ ಲೋಪ/ ದುರ್ನಡತೆ ಎಸಗಿರುವವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವವರೆಗೆ  ಅಂತಿಮ ಆದೇಶದವರೆಗೆ ಇರುತ್ತದೆ.

12. ನಮ್ಮ ಸಂಸ್ಥೆಯ ತಾಂತ್ರಿಕ ವಿಭಾಗದ ತನಿಖಾಧಿಕಾರಿಗಳು ದಿ: 10-3-2017 ರಂದು ಸ್ಥಳ ತನಿಖೆಯನ್ನು ಮಾಡಿ ವರದಿಯನ್ನು ದಿನಾಂಕ: 14-9-2017 ರಂದು ಸಲ್ಲಿಸಿದ್ದಾರೆ. ಸರ್ಕಾರದ ಆದೇಶ ಸಂ:ಲೋ ಇ 93 ಸೇಇಇ 2013, ಬೆಂಗಳೂರು ದಿನಾಂಕ:18-3-2017 ರ ಆದೇಶದಂತೆ ಸರ್ಕಾರವು ಈ ಪ್ರಕರಣದ ಎದುರುದಾರರನ್ನು ಮತ್ತು ಇನ್ನು ಇಬ್ಬರನ್ನು ದೋಷ ಮುಕ್ತರನ್ನಾಗಿಸಿದೆ.

13. ನಮ್ಮ ಸಂಸ್ಥೆಯ ತನಿಖಾಧಿಕಾರಿಗಳು ವಿವಾದಿತ ಕಾಮಗಾರಿಯನ್ನು ಸಂಪೂರ್ಣವಾಗಿ ತನಿಖೆ ಮಾಡಿ 1 ರಿಂದ 3ನೇ ಎದುರುದಾರರ ವಿರುದ್ಧ ಆಪಾದನೆಗಳು ಸಾಬೀತಾಗಿವೆ ಮತ್ತು ವಿವಾದಿತ ರಸ್ತೆ ಕಾಮಗಾರಿಯು ಡಾಂಬರ ಮತ್ತು ಸಬ್‌ಬೇಸ್‌ಗಳ ದಪ್ಪವನ್ನು ಟೆಂಡರ್ ನಿರ್ದಿಷ್ಟತೆಗೆ ಅನುಗುಣವಾಗಿ ಹೋಲಿಸಿದೆ. ಪರಿಮಾಣಗಳ ಕೊರತೆ ಮೊತ್ತವು ರೂ.1,73,01,066/- ಗಳು ಆಗಿರುತ್ತವೆ. ಸದರಿ ಪದರಗಳ ಕೊರತೆಯ ಪರಿಮಾಣಗಳಿಗೆ ಹಣ ಪಾವತಿಯಾಗಿರುವುದು ಹಾಗೂ ಅವ್ಯವಹಾರ ಆಗಿರುವುದು ಕಂಡು ಬಂದಿರುತ್ತದೆ, ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ರೂ.1,73,01,066/- ನಷ್ಟವಾಗಿರುತ್ತದೆ. ಮತ್ತು 1ನೇ ಎದುರುದಾರರು ಶೇಕಡ 25% ರಷ್ಟು, 2 ಮತ್ತು 3ನೇ ಎದುರುದಾರರು ತಲಾ ಶೇಕಡ 37.5% ರಷ್ಟು ನಷ್ಟಕ್ಕೆ ಕಾರಣರಾಗಿದ್ದಾರೆ ಅಂತ ಅಭಿಪ್ರಾಯಪಟ್ಟಿದ್ದಾರೆ.

14. ಆದ್ದರಿಂದ, ವಿವಾದಿತ ಕಾಮಗಾರಿಯಲ್ಲಿ ಸರ್ಕಾರಕ್ಕೆ ನಷ್ಟವಾಗಿರುವ ರೂ.1,73,01,066/- ಗಳಲ್ಲಿ 1ನೇ ಎದುರುದಾರರಿಂದ ಶೇಕಡ 25% ರಷ್ಟು, 2 ಮತ್ತು 3ನೇ ಎದುರುದಾರುಗಳಿಂದ ತಲಾ ಶೇಕಡ 37.5% ರಷ್ಟು ಹಣವನ್ನು ಕಾನೂನಿನ ಪ್ರಕಾರ ವಸೂಲಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಿಕೊಳ್ಳಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿಫಾರಸ್ಸು ಮಾಡಲಾಗಿದೆ.

15. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

5/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ